# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.22/2021**

**ದೋ.ಸಾ. : 35 ಫ್ರಾ.ಸಾ. : 24**

| | | |
|---|---|---|
| ಸಾಕ್ಷಿಯ ಹೆಸರು | : | ರಮಾನಂದ ಐ ನಾಯ್ಕ |
| ತಂದೆಯ ಹೆಸರು | : | ಈಶ್ವರ ನಾಯ್ಕ |
| ವಯಸ್ಸು | : | 43. ವರ್ಷ |
| ಕೆಲಸ | : | ಸಿ.ಹೆಚ್.ಸಿ–1397, ಹೊನ್ನಾವರ ಪೊಲೀಸ್ ಠಾಣೆ |
| ವಾಸ | : | ಹೊನ್ನಾವರ |

**ದಿನಾಂಕಃ 07–02–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:–**

1. ನಾನು 2020 ನವೆಂಬರ್ ರಿಂದ ಇಲ್ಲಿವರೆಗೆ ನಾನು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಸಿ.ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಕಂಪ್ಯೂಟರನ್ನು ಬಳಸುವ ಹಾಗೂ ಡಿಜಿಟಲ್ ಕ್ಯಾಮರಾವನ್ನು ಬಳಸಿ ಫೋಟೊ ತೆಗೆಯುವ ಮತ್ತು ವೀಡಿಯೊ ಮಾಡುವ ಅನುಭವ ಇರುತ್ತದೆ ಹಾಗೂ ಇಲಾಖಾ ವತಿಯಿಂದ ತರಬೇತಿ ನೀಡಿರುತ್ತಾರೆ. ದಿನಾಂಕ 03.05.2021 ರಂದು ತನಿಖಾಧಿಕಾರಿಯ ಮತ್ತು ಪಂಚರ ಸೂಚನೆಯಂತೆ ಕುಮಟಾ ತಾಲೂಕಾ ಆಸ್ಪತ್ರೆಯ ಶವಗಾರದಲ್ಲಿ ಮೃತ ಅಬುತಾಲಿಬ್ ನ ಶವ ಪಂಚನಾಮೆಯನ್ನು ನಿ.ಪಿ–29 ರಂತೆ ಬರೆದು ತನಿಖಾಧಿಕಾರಿಗೆ ನೀಡಿರುತ್ತೇನೆ. ಆನಂತರ ತನಿಖಾಧಿಕಾರಿಯ ಸೂಚನೆಯಂತೆ ಶವದ ಬೆಂಗಾವಲಿನ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ತನಿಖಾಧಿಕಾರಿಯು ಶವ ಪರೀಕ್ಷೆಯ ಕುರಿತು ಕೋರಿಕೆಯನ್ನು ನನಗೆ ನೀಡಿ ಅದನ್ನು ವೈಧ್ಯಾಧಿಕಾರಿಗೆ ನೀಡುವಂತೆ ಸೂಚಿಸಿದ ಮೇರೆಗೆ ನಾನು ಅದನ್ನು ವೈಧಾಧಿಕಾರಿಗೆ ನೀಡಿರುತ್ತೇನೆ. ಅದೇ ದಿನ ವೈಧ್ಯಾಧಿಕಾರಿಗಳು ಕುಮಟಾ ಸರಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ಅಬುತಾಲಿಬ್ ರವರ ಶವ ಪರೀಕ್ಷೆ ನಡೆಸಿ ಆತನ ಮೈ ಮೇಲಿನ ಬಟ್ಟೆಯನ್ನು ನನ್ನ ತಾಬಾಕ್ಕೆ ನೀಡಿರುತ್ತಾರೆ. ಆ ದಿನ ರಾತ್ರಿಯಾಗಿದ್ದರಿಂದ ಸದರಿ ಬಟ್ಟೆಗಳನ್ನು ಠಾಣೆಯಲ್ಲಿ ತಂದು

ಇಟ್ಟುರುತ್ತೇನೆ. ಅದೇ ದಿನ ಠಾಣೆಯಲ್ಲಿ ತನಿಖಾಧಿಕಾರಿಯು ಆರೋಪಿಯು ಕೃತ್ಯದ ಸಮಯದಲ್ಲಿ ಧರಿಸಿದ್ದ ಶರ್ಟನ್ನು ಜಪ್ತುಪಡಿಸಿಕೊಂಡಿದ್ದು, ಸದರಿ ಜಪ್ತುಪಂಚನಾಮೆಯನ್ನು ತನಿಖಾಧಿಕಾರಿಯ ಮತ್ತು ಪಂಚರ ಸೂಚನೆಯಂತೆ ಬರೆದು ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–1(ಬಿ) ಎಂದು ಗುರುತಿಸಲಾಯಿತು.

2. ಮರುದಿನ ಅಂದರೆ ದಿನಾಂಕ 04.05.2021 ರಂದು ಆರೋಪಿಯು ತಾನು ಘಟನಾ ಕಾಲಕ್ಕೆ ಧರಿಸಿದ್ದ ಲುಂಗಿ ಹಾಗೂ ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ಇಟ್ಟ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ತನಿಖಾಧಿಕಾರಿಯು ಆರೋಪಿಯನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ಆರೋಪಿಯು ಒಂದು ಲುಂಗಿ ಹಾಗೂ ಚಾಕುವನ್ನು ತನಿಖಾಧಿಕಾರಿಗೆ ನೀಡಿದ್ದು, ಆ ಸಮಯದಲ್ಲಿ ತನಿಖಾಧಿಕಾರಿ ಮತ್ತು ಪಂಚರು ಸೂಚಿಸಿದಂತೆ ಪಂಚನಾಮೆಯನ್ನು ಬರೆದು, ಸಹಿ ಮಾಡಿ ಅದನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ.–4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–4(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಂದಾವರದ ಜನತಾ ಕಾಲೋನಿಯ ಚಾ.ಸಾ.–14 ರವರ ಮನೆಯ ಕಂಪೌಂಡಿನಲ್ಲಿ ಚಾ.ಸಾ.–10 ರವರು ತೋರಿಸಿದ ಸ್ಥಳದಲ್ಲಿ ತನಿಖಾಧಿಕಾರಿಯು ಸ್ಥಳ ಪಂಚನಾಮೆಯನ್ನು ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರ ಸೂಚನೆ ಮೇರೆಗೆ ನಿ.ಪಿ.–24 ಪಂಚನಾಮೆಯನ್ನು ಬರೆದು ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.–24(ಬಿ) ಎಂದು ಗುರುತಿಸಲಾಯಿತು. ಆನಂತರ ಮೃತನ ಶವ ಪರೀಕ್ಷೆ ಕಾಲಕ್ಕೆ ವೈದ್ಯರು ಸಂಗ್ರಹಿಸಿ ನನಗೆ ನೀಡಿದ ಬಟ್ಟೆಗಳಾದ ಮೃತನ ಲುಂಗಿ, ಶರ್ಟ ಮತ್ತು ನಿಕ್ಕರನ್ನು ನಾನು ತನಿಖಾಧಿಕಾರಿಗೆ ನೀಡಿರುತ್ತೇನೆ. ಆನಂತರ ತನಿಖಾಧಿಕಾರಿಯು ಪಂಚರ ಸಮಕ್ಷಮ ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಆ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.–36 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.–36(ಬಿ) ಎಂದು ಗುರುತಿಸಲಾಯಿತು. ಮೃತನ ಮೈ ಮೇಲಿನ ಲುಂಗಿಯನ್ನು ಈಗಾಗಲೇ ಎಂ.ಒ–8 ಎಂದು, ಶರ್ಟನ್ನು ಎಂ.ಒ–9 ಎಂದು, ನಿಕ್ಕರನ್ನು ಎಂ.ಒ–10 ಎಂದು ಗುರುತಿಸಲಾಗಿದ್ದು, ಅವುಗಳ ಮೇಲೆ ಇರುವ ಸಾಕ್ಷಿಯ

ಸಹಿಯನ್ನು ಎಂ.ಒ-8/1(ಬಿ), ಎಂ.ಒ-9/1(ಬಿ), ಎಂ.ಒ-10/1(ಬಿ) ಎಂದು ಗುರುತಿಸಲಾಯಿತು.

3. ದಿನಾಂಕ 05.05.2021 ರಂದು ಚಾ.ಸಾ-10 ರವರು ತಮ್ಮ ಮೊಬೈಲನ್ನು ಠಾಣೆಗೆ ತಂದು ಹಾಜರುಪಡಿಸಿದ್ದು ಆ ಸಮಯಕ್ಕೆ ತನಿಖಾಧಿಕಾರಿಯ ಸೂಚನೆಯಂತೆ ಸದರಿ ಮೊಬೈಲಿನಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸ್ಕ್ರಿನ್ ಶಾಟ್ ಮಾಡಿ, ಸದರಿ ಸ್ಕ್ರಿನ್ ಶಾಟ್‌ಗಳನ್ನು ಹಾಗೂ ದೃಶ್ಯಾವಳಿಯನ್ನು ಸಿಡಿಗೆ ವರ್ಗಾಯಿಸಿ, ನಂತರ ಸ್ಕ್ರಿನ್ ಶಾಟ್‌ಗಳನ್ನು ಠಾಣೆಯ ಕಂಪ್ಯೂಟರ್ ಮೂಲಕ ಮುದ್ರಿಸಿ, ಸದರಿ ಮೊಬೈಲ್, ಸ್ಕ್ರಿನ್ ಶಾಟ್ ಹಾಗೂ ಸಿಡಿಯನ್ನು 65-B ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗೆ ನೀಡಿರುತ್ತೇನೆ. ಆ ಸಮಯಕ್ಕೆ ತನಿಖಾಧಿಕಾರಿಯು ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದು,ಅವರ ಸೂಚನೆಯ ಮೇರೆಗೆ ನಿ.ಪಿ.-15 ರಂತೆ ಪಂಚನಾಮೆಯನ್ನು ಠಾಣೆಯ ಕಂಪ್ಯೂಟರ್ ಮೂಲಕ ಗಣಕೀಕೃತ ಮಾಡಿ, ನಂತರ ಅದನ್ನು ಪ್ರಿಂಟ್ ಮಾಡಿ, ಅದಕ್ಕೆ ನನ್ನ ಸಹಿ ಮಾಡಿ, ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-15(ಸಿ) ಎಂದು ಗುರುತಿಸಲಾಯಿತು. ಸ್ಕ್ರಿನ್ ಶಾಟ್ ಗಳನ್ನು ಈಗಾಗಲೇ ನಿ.ಪಿ. 18 ರಿಂದ 21 ಎಂದು ಗುರುತಿಸಲಾಗಿದೆ. ಮೊಬೈಲನ್ನು ಈಗಾಗಲೇ ಎಂ.ಒ-11 ಎಂದು ಗುರುತಿಸಲಾಗಿದೆ. ಸಾಕ್ಷಿಯು ತಾನು ನೀಡಿದ 65B ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.-98 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-98(ಎ) ಎಂದು ಗುರುತಿಸಲಾಯಿತು. ಸಿಡಿಯನ್ನು ಈಗಾಗಲೇ ನಿ.ಪಿ-65 ಎಂದು ಗುರುತಿಸಲಾಗಿದೆ. ಅದೇ ದಿನ ಸಾಕ್ಷಿದಾರರಾದ ಚಾ.ಸಾ-18 ರವರು ಮೃತನ ಫೋಟೋವನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು, ಆ ಸಮಯದಲ್ಲಿ ತನಿಖಾಧಿಕಾರಿಯ ಸೂಚನೆಯಂತೆ ನಿ.ಪಿ-42 ರಂತೆ ಜಪ್ತು ಪಂಚನಾಮೆಯನ್ನು ಗಣಕೀಕೃತ ಮಾಡಿ, ಪ್ರಿಂಟ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-42(ಸಿ) ಎಂದು ಗುರುತಿಸಲಾಯಿತು.

4. ಆನಂತರ ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪ್ರಕರಣದ ಸಾಕ್ಷಿದಾರರಾದ ಚಾ.ಸಾ.-11 ಮತ್ತು 12 ರವರ ಹಾಗೂ ಆರೋಪಿಯ ಭಾವಚಿತ್ರಗಳನ್ನು ನಾನು ಠಾಣಾ ಕ್ಯಾಮರಾದಿಂದ ಫೋಟೊ ತೆಗೆದು, ಪ್ರಿಂಟ್ ಮಾಡಿ, ನಂತರ ಅದನ್ನು ಸಿಡಿಗೆ ವರ್ಗಾಯಿಸಿ

ಆನಂತರ ಫೋಟೊ ಮತ್ತು ಸಿಡಿಯನ್ನು 65-B ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗೆ ನೀಡಿರುತ್ತೇನೆ. ಆಗ ತನಿಖಾಧಿಕಾರಿಯು ಸದರಿ ಭಾವಚಿತ್ರಗಳನ್ನು ಪಂಚರ ಸಮಕ್ಷಮ ನಿ.ಪಿ.-46 ಜಪ್ತುಪಂಚನಾಮೆಯಡಿ ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-46(ಬಿ) ಎಂದು ಗುರುತಿಸಲಾಯಿತು. ಚಾ.ಸಾ-11 ರವರ ಭಾವಚಿತ್ರವನ್ನು ಈಗಾಗಲೇ ನಿ.ಪಿ.-50 ಎಂದು, ಚಾ.ಸಾ.-12 ರವರ ಭಾವಚಿತ್ರವನ್ನು ನಿ.ಪಿ.51 ಎಂದು, ಆರೋಪಿಯ ಭಾವಚಿತ್ರವನ್ನು ನಿ.ಪಿ.-52 ಎಂದು ಗುರುತಿಸಲಾಗಿದ್ದು ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-50(ಬಿ), 51(ಬಿ), 52(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ 65-B ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-99 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.99(ಎ) ಎಂದು ಗುರುತಿಸಲಾಯಿತು. ಸಿಡಿಯನ್ನು ಈಗಾಗಲೇ ನಿ.ಪಿ-68 ಎಂದು ಗುರುತಿಸಲಾಗಿದೆ. ತನಿಖಾಧಿಕಾರಿ ಹೇಳಿದಂತೆ ಚಾ.ಸಾ-1 ರವರ ಮರು ಹೇಳಿಕೆಯನ್ನು, ಹಾಗೂ ಚಾ.ಸಾ-10 ರಿಂದ 26 ರವರ ಹೇಳಿಕೆಗಳನ್ನು ಗಣಕೀಕೃತ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಹಾಗೂ ತನಿಖೆಗೆ ಸಹಾಯ ಮಾಡಿದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದ**

5. ಕಂಪ್ಯೂಟರನ್ನು ಬಳಸುವ ಹಾಗೂ ಡಿಜಿಟಲ್ ಕ್ಯಾಮರಾವನ್ನು ಬಳಸಿ ಫೋಟೊ ತೆಗೆಯುವ ಮತ್ತು ವೀಡಿಯೊ ಮಾಡುವ ತರಬೇತಿಯನ್ನು ಹೊಂದಿದ ಬಗ್ಗೆ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ. ಡಿಜಿಟಲ್ ಕ್ಯಾಮರಾವನ್ನು ಬಳಸಿ ಫೋಟೊ ತೆಗೆದರೆ ಮತ್ತು ವೀಡಿಯೊ ಮಾಡಿದರೆ, ದಿನಾಂಕ, ಸಮಯ ಬರುವಂತೆ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಕ್ಯಾಮರಾಗಳಲ್ಲಿ ಫೋಟೊ, ವೀಡಿಯೊ ಎಡಿಟ್ ಮಾಡುವ ವ್ಯವಸ್ಥೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕಂಪ್ಯೂಟರಿನಲ್ಲಿಯೂ ಸಹ ಎಡಿಟ್ ಮಾಡುವ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೂ ಹಾಗೂ ಆರೋಪಿತನಿಗೂ ಅಥವಾ ಮೃತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ನ್ಯಾಯಾಲಯದ ಸಮಯ ಮುಕ್ತಾಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮೂಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ